827

ಸದರೀ ದರಖಾಸ್ತುದಾರನಾದ ಚಿನ್ನಕುಟ್ಟಿಶಟ್ಟಯ ಅರ್ಜಿಯನ್ನು 1884ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 21ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂದ್ದಕುಟ್ಟಿಶಟ್ಟಯ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಅಕ್ಟೋಬರ್ ತಿಂಗಳು 6ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮದಸ್ತಖತ್ತೊಡನೆ ಕೊಡೋಣಾಗಿದೆ.

ವಿ. ಎಸ್. ನರಸಿಹ್ಮಯ್ಯಂಗಾರ್,
ಡಿಸ್ಟ್ರಿಕ್ಟ್ ಜಡ್ಜ್.

ತಾರೀಖು 23ನೇ ಸೆಪ್ಟಂಬರ್ 1884.

ಇದರಿಂದ ತಿಳಿಯಪಡಿಸುವದೇನಂದರೆ, ಈ ಕೆಳಗೆ ನಮೂದಾಗುವ ಸಬ್ ರಿಜಿಸ್ಟ್ರಿ ಆಫೀಸಿನಲ್ಲಿ ಬೇವಾರೆಸಾಗಿ ಇರತಕ್ಕ ಈ ಮುಂದೆ ವಿವರಿಸುವ ದಸ್ತಾವೇಜುಗಳನ್ನ ಹಾಜರ್‌ಮಾಡಿದವರೇ ಆಗಲಿ ಅಥವಾ ವಾಪಸುಪಡಿಯಲಿಕ್ಕೆ ಅವರಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರರೇ ಆಗಲಿ ಈ ನೋಟೀಸು ತಾರೀಖು ಲಾಗಾಯತು ಒಂದು ತಿಂಗಳ ವಳಗಾಗಿ ವಾಪಸ್ ತೆಗದುಕೊಳ್ಳದೇ ತಪ್ಪಿದರೆ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಮೇರೆ ಅನ್ಯಗಳನ್ನ ನಾಶಪಡಿಸಲ್ಪಡುವವು.

ಯಡತೊರೆ ಸಬ್ ರಿಜಿಸ್ಟ್ರಿ ಆಫೀಸಿನಲ್ಲಿ.

ನಂಬರ್.	ದಸ್ತಾವೇಜು ಬರದು ಕೊಟ್ಟವನ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರಿಸಿ ಕೊಂಡವನ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಸಾಜರಾದ ತಾರೀಖು.	ರಿಜಿಸ್ಟ್ರಿಯ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
2 1882—83	ಯಡತೊರೆ ತಾಲ್ಲೂಕು ಗಿಗೆಕೆರೆ ಗ್ರಾಮದಲ್ಲಿ ವಾಸವಾಗಿರುವ ಸ್ಮಾರ್ತ ಬ್ರಾಹ್ಮಣ ತಮ್ಮಯ್ಯನವರ ಮಗ ಹಾಲೀ ಗಂದನಹಳ್ಳಿ ಫಿರಖಾ ಶಾನುಭೋಗ ಕೆಲಸ ನೋಡುವ ನಂಜುಂಡಯ್ಯ	ಯಡತೊರೆ ತಾಲ್ಲೂಕು ಪುರದ ಹೋಬಳಿ ಹಂಪಾಪುರದ ಗ್ರಾಮದಲ್ಲಿರುವ ವೈಷ್ಣವ ಬ್ರಾಹ್ಮಣ ವೆಂಕಟಕೇಪಯ್ಯನವರ ಮಗ ರಾಮಂಣ	14—6—82	14—7—82	ಶಾನುಭೋಗತನದ ಕೆಲಸ ನೋಡುವಂತೆ ಹುಕುಂ ಆಗಿರುವದರಿಂದ ಶಾನಾಯದ ಹುಟ್ಟುವಳಿ ಪೈಕೀ 18 ರೂಪಾಯಿಗಳನ್ನ ಸಾಲಿಯಾನಾ 10 ವರುಷದ ವರಿಗೂ ಪಾವತೀ ಮಾಡುವದಾಗಿ ಕರಾರು.
ತಿರಸ್ಕರಿಸಿದ್ದು 1882	ಮೈಸೂರು ಕಿಲ್ಲೇಯಲ್ಲಿ ವಾಸವಾಗಿ ಇರುವ ಸ್ಮಾರ್ತ ಬ್ರಾಹ್ಮಣ ಅಂಬಳಿ ಸುಬ್ರಹ್ಮಣ್ಯ ಪಂಡಿತರ ಮಗ ಅಂಬಳೆ ಅಂಣಯ್ಯ ಪಂಡಿತರು	ಮೈಸೂರು ಕಿಲ್ಲೇಯಲ್ಲಿರುವ ರುಕ್ಮಿತ ಪುಟ್ಟಣಂಣಶಾಸ್ತ್ರಿಗಳ ಮಕ್ಕಳು ವೈದೀಕವೃತ್ತಿಯಿಂದ ಜೀವಿಸುವ ವೈಷ್ಣ ಶಾಸ್ತ್ರಿಗಳು	8—10—81.		1,200 ರೂಪಾಯಿನ ಭೂಸ್ಥಿತಿ ಕ್ರಯಪತ್ರ.

ಅಬ್ದುಲ್‌ಖಾದರ್, ಕೆ. ಬಿ.,
ರಿಜಿಸ್ಟ್ರಾರ್.

ಕಡೂರು ಡಿಸ್ಟ್ರಿಕ್ಟ್.

ತಾರೀಖು 28ನೇ ಸೆಪ್ಟಂಬರ್ 1884.

ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸುವದೇನಂದರೆ,—ಚಿಕ್ಕಮಗಳೂರು ತಾಲ್ಲೂಕು ಮುಗಳವಳ್ಳಿ ಗ್ರಾಮದಲ್ಲಿರುವ ಮೂಲೆಮನೆ ನಂಜಪ್ಪಶಟ್ಟಿ ಮನೆಗೆ ಮಾಪೆ ಮಜಕೂರ್ ತಾರೀಖು 19ನೇ ರಾತ್ರಿ ಕನ್ನಾಹಾಕಿ ಷುಮಾರು 2,044—8—0 ಮೂಲು ಕಳವು ಮಾಡಿಕೊಂಡು ಹೋದ ಕಳ್ಳರ ದಸ್ತಗಿರಿ ಬಗ್ಗೆ ತಕ್ಕ ಬಾತ್ಮಿ ತಿಳಿಸತಕ್ಕವರಿಗೆ ಕಂಪಣಿ 100 ರೂಪಾಯಿ ಇನಾಂ ಕೊಡಲ್ಪಟ್ಟಿತ್ತು. ಕಳವು ಆದ ಜಿಂದಗೀ ತಪಸೀಲನ್ನು ಯಿದರಿಂ ನಮೂದಿಸಿಯಿದೆ:—